ಅ)ಈ ಮುಂದೆ ಸರ್ಕಾರವು ಹೇಳಿರುವಂತೆ ಟಿ.ಸಿ.ಹೆಚ್.ಪ್ರವೇಶಗಳನ್ನು ಕೂಡಾ ಮೆಡಿಕಲ್ ಹಾಗೂ ಇಂಜಿನಿಯರಿಂಗ್ ಪ್ರವೇಶ ಪರೀಕ್ಷೆಗಳ ತರಹ ನಡೆಸಲು ಕೊನೆ ಗಳಿಗೆಯಲ್ಲಿ ಅದನ್ನು ಕೈಬಿಡಲು ಕಾರಣವೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ)ಟಿ.ಸಿ.ಹೆಚ್.ತರಬೇತಿಗೆ ವಿದ್ಯಾರ್ಥಿಗಳನ್ನು ದಾಖಲಾತಿ ಮಾಡುವ ಬಗ್ಗೆ ಈಗಾಗಲೇ ನಿಯಮಾವಳಿ ರೂಪಿಸಲಾಗಿದ್ದು ಅದರಂತೆ ಕಾರ್ಯಾರಂಭವಾಗಿರುತ್ತದೆ. ಮೆಡಿಕಲ್ ಇಂಜಿನಿಯರಿಂಗ್ ಪ್ರವೇಶಕ್ಕೆ ನಡೆಸುವಂತೆ ಪರೀಕ್ಷೆಗಳನ್ನು ನಡೆಸಲು ಉದ್ದೇಶಿಸಿರುವುದಿಲ್ಲ . ಆದರೆ ಪಿಯುಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳನ್ನು ಆಧರಿಸಿ ಅರ್ಹತೆಯ ಮೇಲೆ ಸೀಟುಗಳನ್ನು ವಿತರಿಸಲಾಗುವುದು. ಆದ್ದರಿಂದ ಕೈ ಬಿಟ್ಟಿರುವ ಪ್ರಶ್ನೆ ಉದ್ಭವಿಸುವುದಿಲ್ಲ.

ವಿಷಯ:- ವಿಜಾಪುರ ಜಿಲ್ಲೆಯ ಅನಧಿಕೃತ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳ ಕುರಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1659 (558ಎ)

ಶ್ರೀ ಬಸವನಗೌಡಪಾಟೀಲ್(ವಿಜಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ವಿಜಾಪುರ ಜಿಲ್ಲೆಯಲ್ಲಿ ಅನಧಿಕೃತ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳೆಷ್ಟು?

ಆ)ಇದ್ದಲ್ಲಿ ಅವುಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಜಿ.ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):-

ಅ) ಪ್ರಾಥಮಿಕ ಶಾಲೆಗಳು	ಮಾಧ್ಯಮಿಕ ಶಾಲೆಗಳು
1	4

ಆ)ಆಡಳಿತ ಮಂಡಳಿಯವರು ಶಾಲೆಗಳನ್ನು ಮುಚ್ಚುವಂತೆ ನೋಟೀಸ್ ಜಾರಿ ಮಾಡಲಾಗಿದೆ. ಹಾಗೂ ಅವರು ಮುಚ್ಚದಿದ್ದಲ್ಲಿ ಆರಕ್ಷಕ ಇಲಾಖೆಯ ಸಹಯೋಗದೊಂದಿಗೆ ಶಾಲೆಗಳನ್ನು ಮುಚ್ಚಿಸಲು ಕ್ರಮ ಕೈಗೊಳ್ಳಲು ಉಪನಿರ್ದೇಶಕರುಗಳಿಗೆ ಪತ್ರದಲ್ಲಿ ತಿಳಿಸಿದೆ.

ವಿಷಯ:- ವಿಜಾಪುರ ಸರ್ಕಾರಿ ಪ್ರೌಢಶಾಲೆ ದುರಸ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1660 (1863)

ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ):- ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಬಿಜಾಪುರ ನಗರದಲ್ಲಿನ ಸರ್ಕಾರಿ ಪ್ರೌಢಶಾಲೆ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 1992-93, 1993-94, 1994-95 ವರ್ಷಗಳಲ್ಲಿ ಈ ಶಾಲೆಗೆ ಎಷ್ಟು ಹಣ ಕಟ್ಟಡ ನಿರ್ವಹಣೆಗಾಗಿ ತೆಗೆದಿರಿಸಲಾಗಿತ್ತು, ವಿನಿಯೋಗಿರುವ ಹಣವೆಷ್ಟು?

ಇ)ಈ ಶಾಲೆಯ ನವೀಕರಣಕ್ಕಾಗಿ ಸರ್ಕಾರದ ಕಾರ್ಯಕ್ರಮಗಳೇನು?